ತಂದೆ, ತಾಯಿ, ವಿಧವೆಯಾಗಿ ತವರು ಮನೆಗೆ ಬಂದು ಕುಳಿತಿರುವ ಮಗಳಾದ ಗಂಗಮ್ಮ, ಅವಳ ತಮ್ಮ ನಿರುದ್ಯೋಗಿ ಬೋರ ಮತ್ತು ಗಂಗಮ್ಮಳದಾಗಿರಬಹುದಾದ ಒಂದು ಮಗು-ಇವಿಷ್ಟು ಜನರು ಇದ್ದಾರೆ. ಮಿಣುಕು ದೀಪವೊಂದು ಉರಿಯುತ್ತಿದೆ.

ಗಂಗಮ್ಮ ಉಳ್ಳವರ ವಿರುದ್ಧ ಅಂದರೆ ಬಂಡವಾಳಶಾಹಿಗಳ ವಿರುದ್ಧ ಕ್ರಾಂತಿಕಾರಕವಾಗಿ ಮಾತಾಡುತ್ತಾಳೆ. ಮುದುಕ, 'ಹುಚ್ಚುಹುಡುಗಿ, ಹಿಂಸೆಯಿಂದ ಎಂದಿಗೂ ನ್ಯಾಯ ಸುಖಗಳು ದೊರಕಲಾರವು' ಎಂದು ಹೇಳುತ್ತಾನೆ. ಆ ಸನ್ನಿವೇಶದ ಸಂಭಾಷಣೆ ಹೀಗಿದೆ:

'ದೊರಕುವುದು... ಖಂಡಿತಾ ದೊರಕುವುದು' ಗಂಗಮ್ಮ ರುದ್ರ ಸ್ವರದಿಂದ ಮಾರ್ನುಡಿಯಿತ್ತಳು! ಇನ್ನು ಆಕೆಯನ್ನು ಮಾತನಾಡಿಸುವುದೇ ಬೇಡವೆಂದು ಮುದುಕನು ಹರಕು ಕಂಬಳಿಯನ್ನು ಗಟ್ಟಿಯಾಗಿ ಹೊದ್ದುಕೊಂಡು ಗೋಡೆಗೆ ಆತು ಕುಳಿತುಕೊಂಡನು. ದೀಪದ ಬತ್ತಿ ಗಾಳಿಗೆ ಅತ್ತಿತ್ತ ಚಲಿಸುತ್ತಿತ್ತು! ಕಮ್ಮಾರನ ಸುತ್ತಿಗೆಯ ಪೆಟ್ಟು ಇನ್ನೂ ಕೇಳುತ್ತಿತ್ತು! 'ಈ ಹಣವಂತರು, ಈ ಧನಿಗಳು, ಎಲ್ಲ ಕಲ್ಲೆದೆಯ ಪಾಪಿಗಳು. ಕರುಣೆಯಿಲ್ಲದ ರಕ್ಕಸರು, ಅವರ ದೆಸೆಯಿಂದ ನಾವು ಹೀಗೆ ಉಪವಾಸ ಬಿದ್ದು ಸಾಯಬೇಕು', ಗಂಗಮ್ಮ ಗೊಣಗುತ್ತಿದ್ದಳು.

'ನಮಗೇನು ಗೊತ್ತು ಮುಂದಿನ ಮಾರ್ಗ? ದೇವರು ಒಂದು ದಾರಿ ತೋರಿಸುತ್ತಾನೆ' ಬಾನಿನೆಡೆಗೆ ಕೈ ತೋರಿಸಿ ಮುದುಕನು ಹೇಳಿದನು. 'ಕೈ ಕಟ್ಟಿ ಕುಳಿತ ಹೇಡಿಗಳಿಗೆ, ಈ ಹಣವಂತರ ಕಾಲಮಣೆಗೆ ಹಣೆತಿಕ್ಕಿ ನೆತ್ತರು ಸುರಿಸಿಕೊಂಡ ರಣಹೇಡಿಗಳಿಗೆ ದೇವರು ಸ್ಮಶಾನ ಕಡೆಗೆ ಮಾತ್ರ ದಾರಿ ತೋರಿಸುತ್ತಾನೆ!' ಗಂಗಮ್ಮ ಅರಚಿದಳು.

'ಆಕೆಯೊಡನೆ ಮುಂದೆ ವಾದಮಾಡುವ ತಾಳ್ಮೆ ಮುದುಕನಿಗೆ ಇರಲಿಲ್ಲ. ಮತ್ತೊಮ್ಮೆ, ಕುಳಿತಲ್ಲಿಂದ ಎದ್ದು ಮುದುಕನು ಕಂಡಿಯಿಂದ ಹೊರ ಇಣಿಕಿ ನೋಡಿದನು. ದೂರದಲ್ಲಿ ಆತನ ಮಗ ಬೋರ ಮಳೆಗೆ ನೆನೆದುಕೊಂಡೇ ಮನೆಯ ಕಡೆಗೆ ಓಡಿಬರುತ್ತಿದ್ದನು'. (ಪುಟ 4) ಇದು ಸಾಂಕೇತಿಕವಾಗಿ ವಿಧಿವಾದವನ್ನು ನಿರಾಕರಿಸಿ, ಯಥಾಸ್ಥಿತಿಯನ್ನು ಬದಲಾಯಿಸುವ ಯುವ ಜನಾಂಗ ಮುಂದೆ ಬರುತ್ತದೆ ಎನ್ನುವುದನ್ನು ಕಥೆಗಾರ ತೋರಿಸುವ ರೀತಿ. ಒಂದು ರೀತಿಯಲ್ಲಿ ಆಶಾವಾದವನ್ನು, ಮುಂದಿನ ದಿನಗಳ ಕುರಿತ ಭರವಸೆಯನ್ನು ಸಾಂಕೇತಿಕವಾಗಿ ಪ್ರಸ್ತುತ ಪಡಿಸಿದಂತೆ ಭಾಸವಾಗುತ್ತದೆ.

ಗಂಗಮ್ಮ ಮನೆಗೆ ಬಂದ ತನ್ನ ತಮ್ಮನನ್ನು ಕ್ರಿಯೆಗೆ ಹಚ್ಚಿ, ಅವನನ್ನು ಹುರಿದುಂಬಿಸಿ ಕಾರ್ಖಾನೆಯ ಮಾಲೀಕನ ಮನೆಗೆ ಹೋಗಿ, ಅಲ್ಲಿದ್ದುದನ್ನು ದೋಚಿಕೊಂಡು ಬರಲು ಕಳುಹಿಸುತ್ತಾಳೆ. ಅವನು ಆವರಣ ಗೋಡೆಯನ್ನು ಜಿಗಿದು ಮಾಳಿಗೆಯ ಮೆಟ್ಟಿಲೇರಿ ಒಳಗೆ ಹೋಗುತ್ತಾನೆ. ಅಲ್ಲಿಂದ ಯಜಮಾನನ ಹಣದ ಚೀಲವನ್ನೂ, ಆಹಾರ ವಸ್ತುಗಳನ್ನೂ ಹಿಡಿದುಕೊಂಡು ಬರುತ್ತಾನೆ. ಕಥೆಯ ಕೊನೆಯ ಭಾಗ ಬಹಳ ಸ್ವಾರಸ್ಯಕರವಾಗಿದೆ: '... ಬೋರ ಆ ಕಡೆ ಸರಿದು, ತಿಂಡಿ ತಿನಿಸುಗಳಿಂದ ತನ್ನ ಬಾಯಿ, ಅಂಗಿಯ ಚೀಲ ಇವುಗಳನ್ನೆಲ್ಲಾ ತುಂಬಿಸಿಕೊಂಡನು. ಅಷ್ಟಾದ ಮೇಲೆ, ಮೆಲ್ಲನೆ ಎದ್ದು ಬಂದು ಸರ್ಜು ಕೋಟಿನ ಕಿಸೆಗೆ ಬೋರ ಮೆಲ್ಲನೆ ಬೆರಳು ಹಾಕಿದನು. ಆ ಚಳಿಯಲ್ಲಿಯೂ ಆತನ ಮೈ ಒಮ್ಮೆ ಆದ್ಯಂತ ಬೆವರಿಹೋಯಿತು! ಹಣದ ಚೀಲವನ್ನು ಮೆಲ್ಲನೆ ಅದರಿಂದ ಎತ್ತಿ, ಕೈಯ್ಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಕೋಣೆಯಿಂದ ಕೆಳಗೆ, ಕಂಪೌಂಡಿನಿಂದ ಹೊರಗೆ ಬಿದ್ದವನೇ ಗಾಳಿಯಲ್ಲಿ ಸವಾರಿ ಮಾಡುವವನಂತೆ ಮನೆಯ ಕಡೆಗೆ ಧಾವಿಸಿ ಬಂದನು.

ಒಲೆಯ ಬೆಂಕಿಯ ಬಳಿ, ಮಿಣುಕು ದೀಪದ ಬೆಳಕಿನಲ್ಲಿ ಎಲ್ಲರೂ ಕುಳಿತುಕೊಂಡರು. ಬೋರನು ಗಂಟು ಬಿಚ್ಚಿದನು. ಬಗೆಬಗೆಯ ತಿಂಡಿ, ಹಲವಾರು ತಿನಸುಗಳು; ಹಣ್ಣು- ಹಂಪಲುಗಳು; ಎಲ್ಲರ ಬಾಯಲ್ಲಿಯೂ ನೀರೂರಿಸಿತು!.

ಮುದುಕ ಒಮ್ಮೆ ತನ್ನ ಹೆಂಡತಿಯ ಕಡೆಗೆ ನೋಡಿದನು! ದೊಡ್ಡ ಮಿಂಚೊಂದು ಹೊರಗಣ ಕತ್ತಲೆಯನ್ನು ಭೇದಿಸಿತು! ಎಲ್ಲರೂ ತಮ್ಮ ತಮ್ಮ ಬಾಯನ್ನು ತುಂಬಿಸಿಕೊಂಡಿದ್ದರು!.

ಗಂಗಮ್ಮ ಹೇಳಿದಳು. 'ಎಂತಹ ಮರ್ಯಾದೆ